

# ಯೇಸು ಕ್ರಿಸ್ತ ಮತ್ತೆ ಬರುತ್ತಾನೆ!

ಮೂಲ : ಮಾಲ್ಕಮ್ ಸ್ಕಾಟ್

# ಯೇಸು ಕ್ರಿಸ್ತ ಮತ್ತೆ ಬರುತ್ತಾನೆ!

ಮೂಲ : ಮಾಲ್ಕಮ್ ಸ್ಕಾಟ್.

ದಿ ಕ್ರಿಸ್ಟಡೆಲ್ಫಿಯನ್ಸ್,
ಅಂಚೆ ಪೆಟ್ಟಿಗೆ ಸಂಖ್ಯೆ 63,
ಮಂಡ್ಯ–571 401.

## ಪೀಠಿಕೆ:

ನಾವು ಜೀವಿಸುತ್ತಿರುವ ಇಂದಿನ ಪ್ರಪಂಚ ಅನೇಕ ಭಿನ್ನತೆಗಳಿಂದ, ತಾಕಲಾಟಗಳಿಂದ ಮತ್ತು ಸಮಸ್ಯೆಗಳಿಂದ ಕೂಡಿದೆ.

ಹಲವಾರು ಜನರು ವೈಭವದಿಂದ ಜೀವನ ನಡೆಸುತ್ತಿದ್ದಾರೆ. ಅವರು ತಮ್ಮ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಶಕ್ತರಾಗಿದ್ದಾರೆ. ಅವರಿಗೆ ಉತ್ತಮವಾದ ಕೆಲಸವಿದೆ, ಜೊತೆಗೆ ಜೀವಿಸಲು ಯಾವುದೇ ಸಮಸ್ಯಗಳಿಲ್ಲ.

ಆದರೆ ಇನ್ನೊಂದೆಡೆ ನಾವು ನೋಡುವಾಗ, ಬಹುಪಾಲು ಜಗತ್ತಿನ ಜನರು ಅನೇಕ ಸಮಸ್ಯೆಗಳಿಂದ ಅಂದರೆ, ಬಡತನ ಮತ್ತು ಅತಿಯಾದ ಜನಸಂಖ್ಯೆ ಸಮಸ್ಯೆಯಿಂದ ಬಳಲುತ್ತಿರುವುದನ್ನು ನೋಡಬಹುದಾಗಿದೆ. ಕೋಟ್ಯಾಂತರ ಜನರು ತಮಗೆ ಮತ್ತು ತಮ್ಮ ಮನೆಯವರಿಗೆ ಆಹಾರಕ್ಕೋಸ್ಕರ ಕಷ್ಟಪಡುತ್ತಿದ್ದಾರೆ ಮತ್ತು ಆಹಾರವಿಲ್ಲದೆ ಸಾಯುತ್ತಿದ್ದಾರೆ. ಅದೇರೀತಿ ಲಕ್ಷಾಂತರ ಜನರು ಗುಣಪಡಿಸಲಾಗದ ಭಯಂಕರ ವ್ಯಾದಿಯಿಂದ ಬಳಲುತ್ತಿದ್ದಾರೆ.

ಅದೇರೀತಿ ಜಗತ್ತಿನ ರಾಜಕೀಯ ಪರಿಸ್ಥಿತಿಗಳನ್ನು ನೋಡುವಾಗ ರಾಷ್ಟ್ರ-ರಾಷ್ಟ್ರಗಳ ನಡುವೆ ಸಾಮರಸ್ಯ ಮುರಿದುಹೋಗಿ ದ್ವೇಷ, ವಿರೋಧಗಳೇ ತುಂಬಿವೆ. ಇವುಗಳ ಪರಿಣಾಮ ಮತ್ತು ದೇಶದೊಳಗಿನ ಆಂತರಿಕ ಕಲಹಗಳ ಪರಿಣಾಮ ಲಕ್ಷಾಂತರ ಅಮಾಯಕ ಪ್ರಜೆಗಳು ಪ್ರಾಣ ನಷ್ಟಪಡುತ್ತಿದ್ದಾರೆ.

ಜಗತ್ತಿನ ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಅನೇಕ ರಾಜಕೀಯ ಪಕ್ಷಗಳು ಅನೇಕ ಸ್ವಯಂಪ್ರೇರಿತ ಸಂಘಟನೆಗಳು, ಆಯಾ ದೇಶಗಳ ಸರ್ಕಾರಗಳು ಪ್ರಯತ್ನಿಸುತ್ತಿದ್ದರೂ ಸಹ ಈ ಸಮಸ್ಯೆಗಳು ಮುಂದುವರೆಯುತ್ತಲೇ ಇವೆ. ಪ್ರಪಂಚದ ಆಡಳಿತದ ವ್ಯವಸ್ಥೆಗಳಲ್ಲಿ ಅದು ಸರ್ವಾಧಿಕಾರತ್ವ ಇರಬಹುದು, ಪ್ರಜಾಪ್ರಭುತ್ವ, ಸಮಾಜವಾದ ಅಥವಾ ಯಾವುದೇ ಸರ್ಕಾರವಾಗಿದ್ದರೂ ಸಹ ಮೇಲಿನ ಸಮಸ್ಯೆಗಳನ್ನು ಪರಿಹರಿಸಲು ಸಾದ್ಯವಾಗಿಲ್ಲ ಮತ್ತು ಮಾನವ ಮೇಲಿನ ಸಮಸ್ಯೆಗಳ ವಿರುದ್ಧ ಸೆಣಸುತ್ತಲೇ ಇದ್ದಾನೆ. ಆದರೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾದ್ಯವಾಗದೇ ಹೆಣಗಾಡುತ್ತಿರುವುದನ್ನು ನೋಡಬಹುದು.

ಪ್ರಪಂಚದ ಹಲವಾರು ಪ್ರಮುಖ ಸಮಸ್ಯೆಗಳು ಮಾನವನ ಸ್ವಾರ್ಥ ಸಾಧನೆಯ ಫಲವಾಗಿ ಉಂಟಾಗಿರುವುಗಳಾಗಿವೆ. ಏಕಂದರೆ ಅಧಿಕಾರದಲ್ಲಿರುವ ಮಾನವರು ಮತ್ತು ಅತ್ಯಂತ ಶ್ರೀಮಂತರು ಕೇವಲ ವೈಯುಕ್ತಿಕ ಅಭಿಲಾಷೆಗಳನ್ನು ಪೂರೈಸಲು ಚಿಂತಿಸುತ್ತಾರೆಯೇ ಹೊರತು, ತಾವು ಪ್ರಸ್ತುತ ಸ್ಥಿತಿಗೆ ಬರಲು ಕಾರಣವಾದ ಜನರಿಗೆ ಸಹಾಯ ಮಾಡುವ ಪ್ರಯತ್ನವನ್ನು ಮಾಡುವುದಿಲ್ಲ. ಇದಕ್ಕೆಲ್ಲಾ ಕಾರಣ ಮಾನವನ ಸ್ವಾರ್ಥವೇ ಆಗಿದೆ.

ಹಾಗಾದರೆ ಮಾನವರಿಗೆ ಈ ಸಮಸ್ಯೆಗಳಿಂದ ಪರಿಹಾರ ಸಿಗುವುದಿಲ್ಲವೇ? ಖಂಡಿತ ಪರಿಹಾರವಿದೆ. ಮಾನವರು ಈ ಲೋಕದ ಸಮಸ್ಯೆಗಳನ್ನು ಸರಿಪಡಿಸಲು ಅಥವ ಪರಿಹರಿಸಲು ಸಾದ್ಯವಿಲ್ಲ. ಆದರೆ ನಮಗೆ ಮೇಲಿನ ಪ್ರಶ್ನೆಗಳಿಗೆ ಉತ್ತರ ಸಿಗಬೇಕಾದರೆ, ಸತ್ಯವೇದವನ್ನು (ಬೈಬಲ್)ತೆರೆದು ನೋಡಿದಾಗ ಮಾತ್ರ ಉತ್ತರ ಸಿಗುತ್ತದೆ. ಏಕಂದರೆ ಸತ್ಯವೇದವು ಮುಂದೆ ನಡೆಯುವ ಸಂಗತಿಗಳನ್ನು(ಭವಿಷ್ಯದ ವಿಚಾರಗಳನ್ನು) ಕುರಿತು ತಿಳಿಸಿರುವ ಗ್ರಂಥವಾಗಿದೆ, ಜೊತೆಗೆ ಈಗಿನ ನಾವು ಜೀವಿಸುತ್ತಿರುವ ಪ್ರಪಂಚವನ್ನು ಉತ್ತಮವಾಗಿಡಲು ಸಹಕಾರಿಯಾಗಲು ನಾವು ಏನು ಮಾಡಬಹುದಾಗಿದೆ ಎಂದು ಸಹ ತಿಳಿಸುತ್ತದೆ. ಸತ್ಯವೇದದಲ್ಲಿ ಸ್ಪಷ್ಟವಾಗಿ ತಿಳಿಸಿದೆ- ಮಾನವನು ತನ್ನ ಸ್ವಾರ್ಥದಿಂದಾಗಿ ಸಮಸ್ಯೆಗಳಿಗೆ ಕಾರಣನಾಗಿದ್ದಾನೆ, ಜೊತೆಗೆ ಮಾನವನು ಯಾವಾಗಲೂ ಕೆಟ್ಟಕಾರ್ಯಗಳನ್ನು ಮಾಡುವವನಾಗಿದ್ದಾನೆ ಎಂದು ತಿಳಿಸಿದೆ. ಆದರೆ ಸತ್ಯವೇದದಲ್ಲಿ ಮುಂದುವರೆದು ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ, ನಾವು ದೇವರ ವಾಕ್ಯಗಳಿಗೆ ವಿಧೇಯರಾಗಿ(ಸತ್ಯವೇದದ ವಾಕ್ಯಗಳಿಗೆ) ನಡೆದರೆ ಮತ್ತು ಸತ್ಯವೇದದ ಮೇಲೆ ಸ್ಥಿರವಾದ ನಂಬಿಕೆಯಿಟ್ಟರೆ, ನಾವು ಶಾಂತಿ, ನೆಮ್ಮದಿ, ಸಂತೋಷಗಳಿಂದ ಕೂಡಿರುವ ಸಮಾಜವಾಗಿ ಈ ಭೂಮಿಯಲ್ಲಿ ಜೀವಿಸಬಹುದು ಮತ್ತು ದೇವರ ಆಶೀರ್ವಾದದ ಮುಖಾಂತರ ಈ ಲೋಕದ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಿದೆ ಎಂದು ತಿಳಿಸುತ್ತದೆ.

ಆದರೆ ಸತ್ಯವೇದದಲ್ಲಿ ಮುಂದುವರೆದು ಮತ್ತೂ ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ, ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮತ್ತು ನೆಮ್ಮದಿ, ಯೇಸುಕ್ರಿಸ್ತ ಈ ಭೂಲೋಕಕ್ಕೆ ಹಿಂತಿರುಗಿ ಬಂದ ನಂತರ ಮಾತ್ರಸಾದ್ಯವೆಂದು ತಿಳಿಸುತ್ತದೆ.

ಈ ಕಿರುಹೊತ್ತಿಗೆಯಲ್ಲಿ ಮುಖ್ಯವಾಗಿ, ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿ ಬರುವ ವಿಷಯುವನ್ನು ಸತ್ಯವೇದದ ಆಧಾರದೊಂದಿಗೆ ತಿಳಿಸಿಕೊಡುವುದೆ ಆಗಿದೆ, ಮತ್ತು ಆತ(ಯೇಸುಕ್ರಿಸ್ತ) ಹಿಂತಿರುಗಿದ ನಂತರ ಯಾವಯಾವ ಕಾರ್ಯಗಳನ್ನು ಮಾಡುತ್ತಾನೆ ಎಂದು ತಿಳಿಸಿಕೊಡುವುದೇ ಆಗಿದೆ.

## *ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿ ಬಂದೇ ಬರುತ್ತಾನೆ:*

ಯೇಸುಕ್ರಿಸ್ತ ಪರಲೋಕದಿಂದ ಭೂಲೋಕಕ್ಕೆ ಹಿಂತಿರುಗಿ ಬರುತ್ತಾನೆ ಎಂದು ಸತ್ಯವೇದವು ಬೋಧಿಸುತ್ತದೆ. ಈ ಒಂದು ವಿಷಯವಾದ ಸುವರ್ತೆಯು ಸತ್ಯವೇದದ ಹೊಸ ಒಡಂಬಡಿಕೆಯ ಸಾಮಾನ್ಯ ವಿಷಯುವಾಗಿದೆ. ಯೇಸುಕ್ರಿಸ್ತ, ದೇವದೂತರು ಮತ್ತು ಅಪೊಸ್ತಲರು ಸಹ ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿ ಬರುತ್ತಾನೆ ಎಂದು ತಿಳಿಸಿದ್ದಾರೆ.

1. ಸ್ವತಃ ಯೇಸುಕ್ರಿಸ್ತ ತನ್ನ ಶಿಷ್ಯರಿಗೆ ತಾನು ಭೂಲೋಕಕ್ಕೆ ಹಿಂತಿರುಗಿ ಬರುವ ವಿಷಯವನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ.

"ಮನುಷ್ಯ ಕುಮಾರನು ತನ್ನ ತಂದೆಯ ಪ್ರಭಾವದೊಡನೆ ತನ್ನ ದೂತರ ಸಮೇತವಾಗಿ ಬರುವನು; ಆವಾಗ ಆತನು ಒಬ್ಬೊಬ್ಬನಿಗೆ ಅವನವನ ನಡೆತಗೆ ತಕ್ಕ ಫಲವನ್ನು ಕೊಡುವನು" (ಮತ್ತಾಯ 16:27).

"ಇಗೋ ಬೇಗ ಬರುತ್ತೇನೆ; ನಾನು ಪ್ರತಿಯೊಬ್ಬನಿಗೆ ಅವನವನ ನಡೆತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ" (ಪ್ರಕಟನೆ22:12).

2. ದೇವದೂತರುಗಳು ಯೇಸುಕ್ರಿಸ್ತ ಹಿಂತಿರುಗಿ ಬಂದೇಬರುತ್ತಾನೆ ಎಂಬ ವಿಷಯವನ್ನು ಧೃಡಪಡಿಸಿದ್ದರೆ. ಈ ವಿಷಯವನ್ನು ನಾವು,

"......ನಿಮ್ಮ ಬಳಿಯಿಂದ ಆಕಾಶಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಗೆ ಹೋಗಿರುವುದನ್ನು ಕಂಡಿರೋ ಅದೇರೀಯಾಗಿ ಬರುವನು" (ಅ.ಕೃ. 1:10–11).

3. ಅದೇರೀತಿ ಅಪೊಸ್ತಲರು ಇದೇ ವಿಷಯುವಾಗಿ ತಮ್ಮ ಬೋಧನೆಯಲ್ಲಿ ವಿಶೇಷವಾಗಿ ತಿಳಿಸಿದ್ದಾರೆ.

"....ಆತನು ನಿಮಗೆ ನೇಮಕವಾದ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು. ಆದರೆ ಸಮಸ್ತವನ್ನು ಸರಿಮಾಡುವ ಕಾಲವು ಬರುವ ತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ" (ಅ.ಕೃ. 3:20–21).

ಈ ವಾಕ್ಯಗಳನ್ನು ನಾವು ನೋಡುವಾಗ ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿ ಬಂದೇ ಬರುತ್ತಾನೆ ಎಂಬ ವಿಷಯವು ಸತ್ಯವೇದದ ಬಹು ಮುಖ್ಯವಿಷಯವಾಗಿದೆ ಮತ್ತು ಯೇಸುಕ್ರಿಸ್ತ ಪರಲೋಕದಿಂದ ಒಂದು ನಿಗಧಿತ ಕಾಲದಲ್ಲಿ ಹಿಂತಿರುಗುತ್ತಾನೆ ಎಂದು ತಿಳಿದುಬರುತ್ತದೆ.

ನಾವು ಮೇಲಿನ ವಾಕ್ಯಗಳನ್ನು ಸೂಕ್ಷ್ಮವಾಗಿ ಗಮನಿಸುವಾಗ ಎರಡು ವಿಷಯಗಳು ನಮಗೆ ಸ್ಪಷ್ಟವಾಗುತ್ತವೆ.

ಅ. *ಯೇಸುಕ್ರಿಸ್ತ ಒಂದು ನಿಗಧಿತ ಸಮಯದ ವರೆಗೆ ಮಾತ್ರ ಪರಲೋಕದಲ್ಲಿರುತ್ತಾನೆ.*

ಆ. *ಆತ ಹಿಂತಿರುಗಿ ಬರುವಾಗ ನಮ್ಮ ಕಾರ್ಯಗಳಿಗೆ ಪ್ರತಿಫಲವನ್ನು ತರುತ್ತಾನೆ.*

ಕೇವಲ ಈ ಮೇಲೆ ತಿಳಿಸಿರುವ ವಾಕ್ಯಗಳಲ್ಲಿ ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿ ಬರುತ್ತಾನೆ ಎಂದು ತಿಳಿಸಿರುವುದು ಮಾತ್ರವಲ್ಲದೆ, ಸತ್ಯವೇದದ ಇನ್ನೂ ಅನೇಕ ವಾಕ್ಯಗಳಲ್ಲಿ ಯೇಸು ಭೂಲೋಕಕ್ಕೆ ಹಿಂತಿರುಗುವ ವಿಚಾರದ ಸಂದೇಶವನ್ನು ನಮಗೆ ತಿಳಿಸಲಾಗಿದೆ.

[1ಕೊರಿಂಥ 15:23, 1ಥೆಸಲೋನಿಕ 2:19, 5:23, 1ತಿಮೋಥೆ 6:14, 2ತಿಮೋಥೆ 1:10, 4:1,8, ತೀತ 2:13, ಯಾಕೋಬ 5:7–8, 1ಪೇತ್ರ 1:16, 1ಯೋಹಾನ 2:28.]

ಈ ಮೇಲಿನ ಎಲ್ಲಾ ವಾಕ್ಯಗಳನ್ನು ನೋಡುವಾಗ ನಮಗೆ ತಿಳಿದುಬರುವ ವಿಷಯ–ಸತ್ಯವೇದದ ಸ್ಪಷ್ಟ ಬೋಧನೆಯೆಂದರೆ ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿ ಬಂದೇಬರುತ್ತಾನೆ. ಅದೇರೀತಿ ಸ್ವತಃ ಯೇಸುಕ್ರಿಸ್ತ ತನ್ನ ಶಿಷ್ಯರಿಗೆ ತಾನು ಹಿಂದಿರುಗಿ ಬರುತ್ತೇನೆ ಎಂದು ತಿಳಿಸಿರುವುದನ್ನು ನಾವು ಸ್ಪಷ್ಟವಾಗಿ ತಿಳಿಯಬಹುದಾಗಿದೆ.

## ಯೇಸುಕ್ರಿಸ್ತ ಹಿಂತಿರುಗಿ ಬಂದ ನಂತರದ ಕಾರ್ಯಗಳೇನು?

ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿ ಬಂದ ನಂತರ ಹಲವಾರು ಕಾರ್ಯಗಳನ್ನು ಮಾಡುತ್ತಾನೆ ಎಂದು ಸತ್ಯವೇದವು ಬೋಧಿಸುತ್ತದೆ.

### *1. ಯೇಸುಕ್ರಿಸ್ತ ಒಂದು ಸ್ಥಿರವಾದ ರಾಜ್ಯಾಧಿಕಾರವನ್ನು ಸ್ಥಾಪಿಸುತ್ತಾನೆ:*

ನಾವು ಈಗಾಗಲೇ ಅಪೋಸ್ತಲರ ಕೃತ್ಯಗಳು 1:1ರಲ್ಲಿ ನೋಡಿರುವಂತೆ ಯೇಸುಕ್ರಿಸ್ತ ಪರಲೋಕಕ್ಕೆ ಏರಿಹೋಗುವಾಗ ಇಬ್ಬರು ದೇವದೂತರು ಯೇಸುಕ್ರಿಸ್ತ ಹಿಂತಿರುಗಿ ಬಂದೇಬರುತ್ತಾನೆ ಎಂದು ತಿಳಿಸಿದ್ದಾರೆ. ಈ ಘಟನೆ ನಡೆಯುವುದಕ್ಕಿಂತ ಮುಂಚಿತವಾಗಿ ಯೇಸುವಿನ ಶಿಷ್ಯರು ಯೇಸುವಿಗೆ ಒಂದು ಪ್ರಶ್ನೆಯನ್ನು ಕೇಳಿದರು. ಅದೇನೆಂದರೆ,

"....ಸ್ವಾಮೀ ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರುಗಿ ಸ್ಥಾಪಿಸಿಕೊಡುವಿಯಾ? ಎಂದು ಕೇಳಿದರು" (ಅ.ಕೃ.1:6).

ಯೇಸುವಿನ ಶಿಷ್ಯರು ಯೇಸುಕ್ರಿಸ್ತ ಒಂದು ರಾಜ್ಯವನ್ನು ಸ್ಥಾಪನೆ ಮಾಡುತ್ತಾನೆ ಎಂದು ತಿಳಿದಿದ್ದರು. ಏಕಂದರೆ ಯೇಸುಕ್ರಿಸ್ತ ಈಗ ಶಿಲುಬೆಯ ಮರಣವನ್ನು ಹೊಂದಿ ಪುನರುತ್ಥಾನ ಹೊಂದಿ ಎದ್ದು ಬಂದಿದ್ದಾನೆ. ಆದ್ದರಿಂದ ಈಗ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ಸ್ಥಾಪನೆ ಮಾಡುತ್ತಾನೆ ಎಂದು ನೆನಸಿದ್ದರು.

ಈ ರೀತಿಯಾಗಿ ಯೇಸುವಿನ ಶಿಷ್ಯರು ನಂಬಲು ಒಳ್ಳೆಯ ಕಾರಣವೂ ಸಹ ಇತ್ತು. ಅದೇನೆಂದರೆ ಹಳೆಯ ಒಡಂಬಡಿಕೆ ಗ್ರಂಥದಲ್ಲಿ ಅನೇಕಬಾರಿ ತಿಳಿಸಿರುವುದೇನೆಂದರೆ, ಒಬ್ಬ ರಕ್ಷಕನ ಮೂಲಕ ಇಂದಿನ ಭೂಲೋಕದ ರಾಜ್ಯಗಳೆಲ್ಲಾ ತೆಗೆದುಹಾಕಲ್ಪಟ್ಟು ಒಂದು ಹೊಸ ರಾಜ್ಯ ಸ್ಥಾಪನೆಯಾಗುತ್ತದೆ ಎಂದು ತಿಳಿಸಿದೆ.

"ಆ ರಾಜರ ಕಾಲದಲ್ಲಿ ಪರಲೋಕದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು, ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮಮಾಡಿ ಶಾಶ್ವತವಾಗಿ ನಿಲ್ಲುವುದು" (ದಾನಿ 2:44).

ಈ ರೀತಿಯಾಗಿ ಸ್ಥಾಪನೆಯಾಗುವ ರಾಜ್ಯದ ಸಿಂಹಾಸನವು ಯೆರುಸಲೇಮ್‌ನಲ್ಲಿರುತ್ತದೆ ಮತ್ತು ಆ ರಾಜ್ಯವು ಭೂಮಿಯ ಎಲ್ಲಾ ಜನಾಂಗಗಳನ್ನು ಆಳುವಂತಹದು ಆಗಿರುತ್ತದೆ.

"ಆ ಕಾಲದಲ್ಲಿ ಯೆರುಸಲೇಮನ್ನು ಯೆಹೋವನ ಸಿಂಹಾಸನವೆಂದು ಕರೆಯುವರು; ಯೇಹೋವನ ನಾಮ ಮಹತ್ವದ ಸ್ಥಾನವಾದ ಯೆರುಸಲೇಮಿಗೆ ಸಕಲ ಜನಾಂಗಗಳವರು ನೆರೆದುಬರುವರು'' (ಯೆರೆಮೀಯ 3:17).

ಆ ರಾಜ್ಯದ ರಾಜ ದೇವರ ಮಾರ್ಗದಲ್ಲಿ ನಾವುಗಳು ನಡೆಯುವ ಹಾಗೆ ಸರಿಯಾದ ರೀತಿಯಲ್ಲಿ ಆಳ್ವಿಕೆ ನಡೆಸುವವನಾಗಿರುತ್ತಾನೆ. ನೆನಪು ಮಾಡಿಕೊಳ್ಳಿ ನಾವು ಪೀಠಿಕೆಯ ಭಾಗದಲ್ಲಿ ಓದಿದಂತೆ "ಈ ದಿನಗಳಲ್ಲಿ ಕಂಡುಬರುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಮಾನವನ ಸ್ವಾರ್ಥವೇ ಕಾರಣವೆಂದು ಮತ್ತು ಮಾನವನ ಕೆಟ್ಟ ಯೋಚನೆಗಳೇ ಕಾರಣವೆಂದು ತಿಳಿದುಕೊಂಡಿದ್ದೇವೆ.'' ಆದರೆ ಮುಂದೆ ಸ್ಥಾಪಿತವಾಗುವ ರಾಜ್ಯದಲ್ಲಿ ಈ ರೀತಿಯ ಮಾನವ ಕಲ್ಪಿತ ನಿಯಮಗಳೇ ಆಗಲೀ, ಆಳ್ವಿಕೆಯಾಗಲೀ, ಕೆಟ್ಟತನವಾಗಲೀ ಇರುವುದಿಲ್ಲ.

ಆ ರಾಜ್ಯದ ಇನ್ನೊಂದು ಪ್ರಮುಖ ಲಕ್ಷಣವೆಂದರೆ, ಆ ರಾಜ್ಯದಲ್ಲಿ ಸರ್ವರೂ ದೇವರ ಮಾರ್ಗವನ್ನು ತಿಳಿದಿರುತ್ತಾರೆ ಮತ್ತು ಅದರಂತೆ ನಡೆಯುತ್ತಾರೆ. ಇಡೀ ಭೂಲೋಕವೇ ಯೆರುಸಲೇಮು ದೇವರ ಮಾರ್ಗವನ್ನು ಬೋಧಿಸಬೇಕು ಎಂದು ಆಶಿಸುತ್ತದೆ.

"ಬಹುದೇಶಗಳವರು–ಬನ್ನಿರಿ, ಯೆಹೋವನ ಪರ್ವತಕ್ಕೆ, ಯಾಕೋಬ್ಯರ ದೇವರ ಮಂದಿರಕ್ಕೆ ಹೋಗೋಣ; ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು, ನಾವು ಆತನ ದಾರಿಗಳಲ್ಲಿ ನಡೆಯುವೆವು, ಎಂದು ಹೇಳುವರು. ಏಕಂದರೆ ಚೀಯೋನಿನಿಂದ ಧರ್ಮೋಪದೇಶವೂ, ಯೆರುಸಲೇಮಿನಿಂದ ಯೆಹೋವನ ವಾಕ್ಯವು ಹೊರಡುವುವು'' (ಮೀಕ 4:2).

## *2. ಯೇಸುಕ್ರಿಸ್ತ ಆ ರಾಜ್ಯದ ರಾಜನಾಗಿರುತ್ತಾನೆ:*

2ಸಮುವೇಲ 7:12–16ನೇ ವಚನಗಳಲ್ಲಿ, ದೇವರು ದಾವೀದನಿಗೆ ಈ ರೀತಿಯಾಗಿ ವಾಗ್ದಾನ ಮಾಡಿದ್ದಾನೆ.

12 ಮತ್ತು 13ನೇ ವಾಕ್ಯಗಳನ್ನು ಓದುವಾಗ–"ನಿನ್ನ ಆಯುಷ್ಕಾಲವು ಮುಗಿದು ನೀನು ಪಿತೃಗಳ ಬಳಿಗೆ ಸೇರಿದಮೇಲೆ ನಿನ್ನಿಂದ ಹುಟ್ಟುವವನನ್ನು

ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರಪಡಿಸುವೆನು. ಅವನು ನನ್ನ ಹೆಸರಿಗಾಗಿ ಒಂದು ಮನೆಯುನ್ನು ಕಟ್ಟುವನು ನಾನು ಅವನ ರಾಜ್ಯಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು."

ಈ ಮೇಲಿನ ವಾಗ್ದಾನವನ್ನು ನಾವು ಗಮನಿಸುವಾಗ ಒಬ್ಬ ಮಗ(ಸಂತಾನ)ನ ವಿಷಯುವಾಗಿ ವಾಗ್ದಾನವನ್ನು ದೇವರು ಮಾಡಿದ್ದಾನೆ ಮತ್ತು ಆತ ಮುಂದೆ ಸ್ಥಾಪನೆಯಾಗುವ ರಾಜ್ಯದ ಸಿಂಹಸನದಲ್ಲಿ ಸದಾಕಾಲ ಆಳ್ವಿಕೆ ನಡೆಸುತ್ತಾನೆ ಎಂದು ತಿಳಿಸಿದೆ. ಆ ಮಗನು(ಸಂತಾನ) ಯಾರು ಎಂಬುದನ್ನು ಸತ್ಯವೇದ ತಿಳಿಸುತ್ತದೆ.

ಲೂಕನ ಸುವಾರ್ತೆ ಮೊದಲನೆ ಅಧ್ಯಾಯದಲ್ಲಿ ದೇವದೂತನು ಮರಿಯಳ ಬಳಿಗೆ ಬಂದು ನಿನಗೆ ಒಬ್ಬ ಮಗನು ಹುಟ್ಟುವನು, ಮತ್ತು ಆತನು ಅತ್ಯಂತ ವಿಶೇಷವಾದವನು, ಏಕಂದರೆ ಆತನ ಹುಟ್ಟುವಿಕೆ ಒಂದು ಮಹಾಶ್ಚಾರ್ಯವಾಗಿದೆ ಎಂದು ತಿಳಿಸುತ್ತಾನೆ.

ಆ ಮಗನ ಹೆಸರೇ ಯೇಸು (ಲೂಕ 1:31).

ಲೂಕ 1:32–33ನೇ ವಚನಗಳನ್ನು ನೋಡುವಾಗ–"ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನೆಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬ ವಂಶವನ್ನು ಸದಾಕಾಲ ಆಳುವನು, ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ."

ಮತ್ತಾಯನ ಸುವಾರ್ತೆ 1:1 ರಲ್ಲಿ ನೋಡುವಾಗ ಯೇಸುಕ್ರಿಸ್ತ ದಾವೀದನ ವಂಶದವನು ಎಂದು ಸ್ಪಷ್ಟವಾಗಿ ತಿಳಿಸಿಕೊಡುತ್ತದೆ.

ಸತ್ಯವೇದದಲ್ಲಿ ಸ್ಪಷ್ಟವಾಗಿ ತಿಳಿಸಿದೆ ದಾವೀದನ ಸಂತಾನದವನಾದ ಯೇಸುಕ್ರಿಸ್ತ ಆ ಸಿಂಹಾಸನದ ಮೇಲೆ ಕೂತುಕೊಳ್ಳುತ್ತಾನೆ. ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿ ಬಂದನಂತರ ಆತ ಮತ್ತೆ ಇಸ್ರಾಯೇಲ್ ರಾಜ್ಯವನ್ನು ಸ್ಥಾಪಿಸುತ್ತಾನೆ. ಆತನ ಸಿಂಹಾಸನ ಮತ್ತು ರಾಜಧಾನಿ ಯೆರುಸಲೇಮ್ ಆಗಿರುತ್ತದೆ. ಏಕಂದರೆ ಅದೇ ಯೆರುಸಲೇಮೇ ಆತನ ಮೂಲ ಪಿತನಾದ ದಾವೀದನ ಸಿಂಹಾಸನದ ಸ್ಥಳವೂ ಆಗಿದೆ.

ಸತ್ಯವೇದದಲ್ಲಿ ಮತ್ತೂ ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ, ಯೆರುಸಲೇಮಿನಲ್ಲಿ ದೇವರ ರಾಜ್ಯ ಸ್ಥಾಪನೆಯಾಗಿ ಪ್ರಪಂಚವನ್ನೆಲ್ಲಾ ಆಳ್ವಿಕೆ ನಡೆಸುತ್ತದೆ ಎಂದು ತಿಳಿಸಿದೆ.

"ಆ ಕಾಲದಲ್ಲಿ ಯೆರುಸಲೇಮನ್ನು ಯೆಹೋವನ ಸಿಂಹಾಸನವೆಂದು ಕರೆಯುವರು'' (ಯೆರೆಮೀಯ 3:17).

ಸ್ವತಃ ಯೇಸುಕ್ರಿಸ್ತನು ಸಹ ಯೆರುಸಲೇಮನ್ನು "ದೊಡ್ಡ ಅರಸನ ಪಟ್ಟಣವಾಗಿದೆ'' ಎಂದು ತಿಳಿಸಿದ್ದಾನೆ (ಮತ್ತಾಯ 5:35).

ಇಲ್ಲಿಯವರೆಗೆ ಸತ್ಯವೇದದ ಬೋಧನೆಯ ಕೆಳಗಿನ ಅಂಶಗಳನ್ನು ನೋಡಿದ್ದೇವೆ.

*1. ಯೇಸುಕ್ರಿಸ್ತ ಈ ಭೂಲೋಕಕ್ಕೆ ಹಿಂತಿರುಗಿ ಬರುತ್ತಾನೆ.*

*2. ಒಂದು ರಾಜ್ಯ ಭೂಮಿಯ ಮೇಲೆ ಸ್ಥಾಪಿಸಲ್ಪಡುತ್ತದೆ.*

*3. ಆ ರಾಜ್ಯದ ರಾಜ ಯೆರುಸಲೇಮಿನಿಂದ ಆಳ್ವಿಕೆ ನಡೆಸುತ್ತಾನೆ.*

*4. ಆ ರಾಜ ಮನವರ ನಿಯಮಗಳನ್ನು ಉಪಯೋಗಿಸದೆ, ದೇವರ ನಿಯಮಕ್ಕನುಸಾರ ರಾಜ್ಯವಾಳುತ್ತಾನೆ.*

*5. ಆತ ಭೂಲೋಕದವರನ್ನೆಲ್ಲಾ ಆಳುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ.*

*6. ಆ ರಾಜನೇ ಯೇಸುಕ್ರಿಸ್ತ!*

### *3. ಯೇಸು ಸತ್ತವರೊಳಗಿಂದ ಪುನರುತ್ಥಾನ ಹೊಂದಿದವನಾಗಿದ್ದಾನೆ:*

ಸತ್ಯವೇದದ ಹಳೆಯ ಒಡಂಬಡಿಕೆಯಲ್ಲಿ ಕಂಡುಬರುವ ಹಲವಾರು ನೀತಿವಂತ ಮಾನವರು{ಪುರುಷ ಮತ್ತು ಸ್ತ್ರೀಯರು} ದೇವರ ಮೇಲೆ ಸ್ಥಿರವಾದ ನಂಬಿಕೆಯನ್ನು ಇಟ್ಟು ಜೀವನವನ್ನು ಮಾಡಿದರು, ಮತ್ತು ನಿತ್ಯಜೀವವನ್ನು ನಿರೀಕ್ಷಿಸಿ ಮರಣವನ್ನು ಹೊಂದಿದ್ದಾರೆ ಮತ್ತು ಅವರು ಇನ್ನೂ ನಿತ್ಯಜೀವವನ್ನು ಪಡೆದಿಲ್ಲ ಎಂದು ಇಬ್ರಿಯರಿಗೆ ಬರೆದ ಪತ್ರಿಕೆ 11ನೇ ಅಧ್ಯಾಯದಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಇಬ್ರಿಯರಿಗೆ ಬರೆದ ಪತ್ರಿಕೆ 11ನೇ ಅಧ್ಯಾಯದಲ್ಲಿ ತಿಳಿಸಿರುವ ಪಟ್ಟಿ ನೀತಿವಂತ ಪುರುಷ ಸ್ತ್ರೀಯರ ಒಂದು ಸಣ್ಣ ಪಟ್ಟಿ ಮಾತ್ರವಾಗಿದೆ. ಅವರುಗಳು ಮಾತ್ರವಲ್ಲದೆ ಇನ್ನೂ ಅನೇಕರು ದೇವರಿಗೆ ವಿಧೇಯ ನಂಬಿಕಸ್ತರಾಗಿ ಜೀವಿತ ನಡೆಸಿ ಮರಣ ಹೊಂದಿದ್ದಾರೆ. ಸತ್ಯವೇದದ ಅನೇಕ ಅಧ್ಯಾಯಗಳು ನೀತಿವಂತ ಜೀವಿತ ನಡೆಸಿದ ಮಾನವರು ಇನ್ನೂ ನಿತ್ಯಜೀವ ಪಡೆದಿಲ್ಲ ಎಂದು ತಿಳಿಸಿಕೊಡುತ್ತದೆ.

"ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೆ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ" (ಇಬ್ರಿಯರಿಗೆ11:39).

ಹಾಗಾದರೆ ಅವರು ನಿತ್ಯಜೀವದ ವಾಗ್ದಾನದ ಫಲವನ್ನು ಹೇಗೆ ಹೊಂದುತ್ತಾರೆ? ಯೇಸುಕ್ರಿಸ್ತ ಹಿಂತಿರುಗಿದ ನಂತರ ಪುನರುತ್ಥಾನದ ಮೂಲಕ ವಾಗ್ದಾನದ ಫಲವಾದ ನಿತ್ಯಜೀವವನ್ನು ಹೊಂದುತ್ತಾರೆ. ಈ ಒಂದು ಸಂದೇಶವನ್ನೇ ಕುರಿತು ಸತ್ಯವೇದದಲ್ಲಿ ಹಲವಾರು ಕಡೆಗಳಲ್ಲಿ ಸ್ಪಷ್ಟವಾಗಿ ತಿಳಿಸಿದೆ.

"ಕರ್ತನು ತಾನೇ ಆಜ್ಞಾ ಘೋಷದೊಡನೆಯೂ ಪ್ರಧಾನದೂತನ ಶಬ್ದದೊಡನೆಯೂ, ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದುಬರುವನು, ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದುಬರುವರು" (1ಥೆಸಲೋನಿಕ 4:16).

"ಧೂಳಿನ ನೆಲದೊಳಗೆ ಧೀರ್ಘನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚೆತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನಾನಿತ್ಯತಿರಸ್ಕಾರಗಳನ್ನು ಅನುಭವಿಸುವರು" (ದಾನಿಯೇಲ 12:2).

"ನಿಮಗೆ ನಿಜನಿಜವಾಗಿ ಹೇಳುತ್ತೇನೆ ಸತ್ತವರು ದೇವಕುಮಾರನ ಧ್ವನಿಯನ್ನು ಕೇಳುವ ಕಾಲ ಬರುತ್ತದೆ, ಈಗಲೇ ಬಂದಿದೆ; ಕೇಳುವವರು ಬದುಕುವರು" (ಯೋಹಾನ 5:25).

"ಆದಕ್ಕೆ ಆಶ್ಚರ್ಯಪಡಬೇಡಿರಿ; ಸಮಾದಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವಕಾಲ ಬರುತ್ತದೆ" (ಯೋಹಾನ 5:28).

ದೇವರನ್ನು ತಿಳಿದಿರುವ ಜನರಿಗೆ ಅವರ ನಡುವಳಿಕೆಗೆ ತೀರ್ಪುಕೊಡಲು ಪುನರುತ್ಥಾನವಾಗುತ್ತದೆ. ಯೇಸುಕ್ರಿಸ್ತನು ನ್ಯಾಯತೀರ್ವಿಕೆಯನ್ನು ಮಾಡುತ್ತಾನೆ ಎಂದು ಅಪೋಸ್ತಲನಾದ ಪೌಲನು ಧೃಡೀಕರಿಸುತ್ತಾನೆ.

"ದೇವರ ಮುಂದೆ ಮತ್ತು ಜೀವಿಸುವವರಿಗೂ ಸತ್ತವರಿಗೂ ನ್ಯಾಯತೀರಿಸುವದಕ್ಕೆ ಬರುವ ಕ್ರಿಸ್ತಯೇಸುವಿನ ಮುಂದೆ ಆತನ ಪ್ರತ್ಯಕ್ಷತೆ ಮೇಲೆ ಆಣೆಯಿಟ್ಟು ಹೇಳುವುದೇನೆಂದರೆ..." (2ತಿಮೋಥೆ 4:1).

***4.ಯೇಸುಕ್ರಿಸ್ತ ನೀತಿವಂತರಿಗೆ ಪ್ರತಿಫಲ(ಬಹುಮಾನ) ಕೊಡುತ್ತಾನೆ.***

ಪ್ರಕಟನೆ ಗ್ರಂಥದ ವಾಕ್ಯಗಳನ್ನು ಯೇಸುಕ್ರಿಸ್ತ ತನ್ನ ಶಿಷ್ಯರಿಗೆ ನೀಡಿದನು. ಆ ವಾಕ್ಯಗಳು ಯಾರು ಯೇಸುವಿನ ನಂಬಿಗಸ್ತರಾಗಿರುತ್ತಾರೋ ಅವರಿಗೆ ಮತ್ತು ಆತನ ಹಿಂದಿರುಗುವಿಕೆಯನ್ನು ಎದುರು ನೋಡುತ್ತಿರುವವರಿಗೆ ಸ್ಫೂರ್ತಿದಾಯಕವಾಗಿದೆ. ಆ ಸ್ಫೂರ್ತಿದಾಯಕ ವಾಕ್ಯಗಳಲ್ಲಿ ಆತನು ತಾನು ಮಾಡಿದ ವಾಗ್ದಾನಕ್ಕೆ ಅನುಗುಣವಾಗಿ ತನ್ನನ್ನು ನಿರೀಕ್ಷಿಸುವ ನಂಬಿಕಸ್ತರಿಗೆ ಪ್ರತಿಫಲವನ್ನು ತರುತ್ತೇನೆ ಎಂದು ತಿಳಿಸಿದ್ದಾನೆ.

"ಇಗೋ, ಬೇಗ ಬರುತ್ತೇನೆ; ನಾನು ಪ್ರತಿಯೊಬ್ಬರಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ'' (ಪ್ರಕಟನೆ22:12).

ರೋಮಾಪುರದವರಿಗೆ ಬರೆದ ಪತ್ರಿಕೆ 12ನೇ ಅಧ್ಯಾಯದಲ್ಲಿ- ನಾವು ದೇವರಿಗೆ ವಿಧೇಯರಾಗಿ ನಂಬಿಕಸ್ತರಾಗಿ ನಡೆದರೆ ನಿತ್ಯಜೀವವನ್ನು ಹೊಂದುತ್ತೇವೆ, ಆದರೆ ನಾವು ದೇವರಿಗೆ ವಿರುದ್ಧವಾಗಿ, ಆತನ ಆಜ್ಞೆಗಳಿಗೆ ಅವಿಧೇಯರಾಗಿ ಮತ್ತು ನಮ್ಮನ್ನು ನಾವೇ ಹೆಚ್ಚಿಸಿಕೊಂಡರೆ ದೇವರ ಕೋಪಕ್ಕೆ ಗುರಿಯಾಗಿ ನಾಶನ ಹೊಂದುತ್ತೇವೆ ಎಂದು ತಿಳಿಸಲ್ಪಟ್ಟಿದೆ.

ರೋಮಾಪುರದವರಿಗೆ ಬರೆದ ಪತ್ರಿಕೆ 2:6–10 ನೇ ವಾಕ್ಯಗಳಲ್ಲಿ ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ-"ಆತನು ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು. ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೆಯದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು. ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವುವು. ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ, ಸಂಕಟವೂ ಬರುವುವು- ಯೆಹೂದ್ಯರಿಗೆ ಮೊದಲು, ಆನಂತರ ಗ್ರೀಕರಿಗೆ(ಅನ್ಯರಿಗೆ)ಸಹ. ಆದರೆ ಒಳ್ಳೆದನ್ನು ನಡಿಸುವ ಪ್ರತಿಯೊಬ್ಬರಿಗೆ ಪ್ರಭಾವವೂ ಮಾನವೂ ಮನಶ್ಶಾಂತಿಯೂ ಉಂಟಾಗುವುವು-ಯೆಹೂದ್ಯರಿಗೆ ಮೊದಲು ಆನಂತರ ಗ್ರೀಕರಿಗೆ(ಅನ್ಯರಿಗೆ) ಸಹ.''

ಮತ್ತಾಯನ ಸುವಾರ್ತೆ 25:31–46 ನೇ ವಾಕ್ಯಗಳಲ್ಲಿ ಯೇಸುಕ್ರಿಸ್ತ ಒಂದು ಸಾಮ್ಯದ ಮೂಲಕ ತನ್ನ ಶಿಷ್ಯರಿಗೆ ನ್ಯಾಯತೀರ್ವಿಕೆಯ ವಿಷಯವನ್ನು ತಿಳಿಸಿದ್ದಾನೆ. ಈ ಸಾಮ್ಯದಲ್ಲಿನ ಕುರಿಗಳು ಮತ್ತು ಆಡುಗಳು ಎರಡು ರೀತಿಯ ಗುಂಪಿನ ಜನರಿಗೆ ಉಂಟಾಗುವ ನ್ಯಾಯತೀರ್ವಿಕೆಗೆ ಹೋಲಿಕೆಯಾಗಿದೆ. ಕುರಿಗಳು ಎಂದರೆ ಯಾರು ದೇವರಿಗೆ ವಿಧೇಯರಾಗಿ ನಡೆಯುತ್ತಾರೋ ಅವರಾಗಿರುತ್ತಾರೆ. ಅದೇರೀತಿ ಆಡುಗಳು ಎಂದರೆ ಯಾರು ದೇವರಿಗೆ ಅವಿಧೇಯರಾಗಿ ನಡೆಯುತ್ತಾರೋ ಅವರಾಗಿರುತ್ತಾರೆ.

ಯಾರು ದೇವರಿಗೆ ವಿಧೇಯರಾಗಿ ನಂಬಿಕಸ್ತರಾಗಿರುತ್ತಾರೋ ಅವರು ನಿತ್ಯಜೀವವನ್ನು ಹೊಂದುತ್ತಾರೆ(ವಚನ34) ಮತ್ತು ಯಾರು ದೇವರಿಗೆ ಅವಿಧೇಯುಲಾಗಿ ನಡೆದಿರುತ್ತಾರೋ ಅವರಿಗೆ ನಾಶನ ಶಿಕ್ಷೆ(ವಚನ 41) ಉಂಟಾಗುವುದನ್ನು ತಿಳಿಸಿಕೊಟ್ಟಿದೆ.

ಯೋಹಾನನ ಸುವಾರ್ತೆ 5:29 ರಲ್ಲಿ ನೋಡಿದಾಗ ನ್ಯಾಯತೀರ್ವಿಕೆಯಲ್ಲಿ ಒಳ್ಳೆಯದನ್ನು ಮಾಡಿರುವವರಿಗೆ ನಿತ್ಯಜೀವ ಕೊಡಲು, ಕೆಟ್ಟದ್ದನ್ನು ನಡಿಸಿದವರಿಗೆ ಶಿಕ್ಷೆಗಾಗಿ ನ್ಯಾಯತೀರ್ವಿಕೆ ಉಂಟಾಗುತ್ತದೆ ಎಂದು ತಿಳಿಸಿದೆ.

ಸತ್ಯವೇದದಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವುದೇನೆಂದರೆ– ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗೆ ಬರುತ್ತಾನೆ ಮತ್ತು ಯಾರು ದೇವರಿಗೆ ವಿಧೇಯರಾಗಿ ನಂಬಿಕಸ್ತ ಮಕ್ಕಳಾಗಿ ನಡೆಯುತ್ತಾರೋ ಅವರಿಗೆ ಪ್ರತಿಫಲವನ್ನು ಕೊಡುತ್ತಾನೆ. ಯಾರು ನಂಬಿಕಸ್ತ ಮಕ್ಕಳಾಗಿರುತ್ತಾರೋ ಅವರಿಗೆ ಸಂಭ್ರಮದಿಂದ ಕೂಡಿರುವ ಜೀವಿತವನ್ನು ಮತ್ತು ನಿತ್ಯಜೀವವನ್ನು ತನ್ನ ರಾಜ್ಯದಲ್ಲಿ ಕೊಡುವವನಾಗಿದ್ದಾನೆ.

## *ಯೇಸುಕ್ರಿಸ್ತ ಯಾವಾಗ ಹಿಂತಿರುಗಿ ಬರುತ್ತಾನೆ?*

ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿ ಬಂದೇ ಬರುತ್ತಾನೆ ಎಂದು ಸತ್ಯವೇದದಲ್ಲಿ ಸ್ಪಷ್ಟವಾಗಿ ಬರೆಸಲ್ಪಟ್ಟಿದೆ. ದೇವರು ಈಗಾಗಲೇ ಈ ಕಾರ್ಯಕ್ಕೆ ಒಂದು ದಿನವನ್ನು ನಿಗಧಿಮಾಡಿದ್ದಾನೆ. ಅಪೋಸ್ತಲರ ಕೃತ್ಯಗಳು 17ನೇ ಅಧ್ಯಾಯ ಈ ವಿಷಯವನ್ನು ಧೃಡಪಡಿಸುತ್ತದೆ.

"ಯಾಕಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ....." (ಅ.ಕೃ. 17:31).

## ***ಆದರೆ ಆ ದಿನ ಯಾವುದು?***

ಮಾರ್ಕನ ಸುವಾರ್ತೆ 13ನೇ ಅಧ್ಯಾಯದಲ್ಲಿ ಯೇಸುಕ್ರಿಸ್ತ ತನ್ನ ಶಿಷ್ಯರೊಡನೆ ಮುಂದೆ ನಡೆಯುವಂತಹ ಘಟನೆಗಳನ್ನು ಪ್ರವಾದನೆ ನುಡಿದಿದ್ದಾನೆ.

ಈ ಪ್ರವದನೆಯಲ್ಲಿ ತಾನು ಈ ಲೋಕಕ್ಕೆ ಹಿಂತಿರುಗಿ ಬರುತ್ತೇನೆ ಮತ್ತು ತನ್ನವರನ್ನು, ಅಂದರೆ ನಂಬಿಕಸ್ತರನ್ನು ಒಂದೆಡೆ ಸೇರಿಸುತ್ತೇನೆ ಎಂದು ತಿಳಿಸಿದ್ದಾನೆ.

"ಆಗ ಮನುಷ್ಯಕುಮಾರನು ಬಹು ಬಲದಿಂದಲೂ ಮಹಿಮೆಯಿಂದಲೂ ಮೇಘಗಳಲ್ಲಿ ಬರುವುದನ್ನು ಕಾಣುವರು, ಮತ್ತು ಆತನು ತನ್ನ ದೂತರನ್ನು ಕಳುಹಿಸಿ ತಾನು ಆದುಕೊಂಡವರನ್ನು ಭೂಮಿಯ ಕಟ್ಟಕಡೆಯಿಂದ ಆಕಾಶದ ಕಟ್ಟಕಡೆಯವರೆಗೆ ನಾಲ್ಕು ದಿಕ್ಕುಗಳಿಂದ ಒಟ್ಟುಗೂಡಿಸುವರು" (ಮಾರ್ಕ 13:26–27).

ಜೊತೆಗೆ ಆ ದಿನ ಯಾವತ್ತು ಎಂಬುದು ತನಗೂ ಗೊತ್ತಿಲ್ಲ ಎಂದು ಯೇಸು ತಿಳಿಸಿದ್ದಾನೆ.

"ಇದಲ್ಲದೆ ಆ ದಿನದ ವಿಷಯವಾಗಲೀ ಆ ಗಳಿಗೆಯ ವಿಷಯವಾಗಲಿ ನನ್ನ ತಂದೆಗೆ ತಿಳಿಯುವುದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು" (ಮಾರ್ಕ13:32).

ಆನಂತರ ಮುಂದುವರೆದ ಘಟನೆಗಳನ್ನು ನೋಡುವಾಗ– ಯೇಸು ಮರಣಹೊಂದಿ, ಪುನರುತ್ಥಾನವನ್ನು ಪಡೆದು ನಿತ್ಯಜೀವವನ್ನು ಹೊಂದಿದಮೇಲೆ, ಆತನ ಶಿಷ್ಯರು ಇಸ್ರಾಯೇಲ್ ಜನರಿಗೆ ಯಾವಾಗ ರಾಜ್ಯವನ್ನು ಸ್ಥಾಪನೆ ಮಾಡಿಕೊಡುವಿ ಎಂದು ಪ್ರಶ್ನಿಸಿದರು(ಅ.ಕೃ. 1:6).

ಈ ಪ್ರಶ್ನೆಗೆ ಉತ್ತರವಾಗಿ ಯೇಸುಕ್ರಿಸ್ತ ಸ್ಪಷ್ಟವಾಗಿ ತಿಳಿಸಿದ್ದಾನೆ– "ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನು ಸಮಯಗಳನ್ನು ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ" (ಅ.ಕೃ. 1:7).

ಸತ್ಯವೇದದ ಈ ಮೇಲಿನ ವಾಕ್ಯಗಳಿಂದ ತಿಳಿಯುವುದೇನೆಂದರೆ– ಯೇಸುಕ್ರಿಸ್ತ ಹಿಂತಿರುಗುವ ದಿನ ದೇವರಿಗೆ ಮಾತ್ರ ತಿಳಿದಿದೆ. ಆದರೆ ಆತನು ಹಿಂತಿರುಗುವ ಮುಂಚಿತವಾಗಿ ನಡೆಯುವ ಘಟನೆಗಳು, ಸೂಚನೆ(ಗುರುತು)ಗಳನ್ನು ಸತ್ಯವೇದದಲ್ಲಿ ತಿಳಿಸಿದೆ.

ಯೇಸುಕ್ರಿಸ್ತ ಹಿಂತಿರುಗುವ ಸೂಚನೆಗಳು:–

ಇಸ್ರಾಯೇಲ್ ಜನರು "ವಿಶೇಷ" ಜನರಾಗಿದ್ದಾರೆ. ಇಸ್ರಾಯೇಲ್ ಜನರು ದೇವರ ಸ್ವಕೀಯ ಜನರಾಗಿದ್ದಾರೆ ಮತ್ತು ದೇವರು ಇವರನ್ನು ತನ್ನ ಕಾರ್ಯಗಳನ್ನು, ತನ್ನ ಸರ್ವಶಕ್ತತನವನ್ನು ತೋರ್ಪಡಿಸಲು ಬಳಸಿಕೊಂಡಿದ್ದಾನೆ. ಇಸ್ರಾಯೇಲ್ ಜನರ ಮೂಲಕ ದೇವರು ಸತ್ಯವಾಕ್ಯಗಳನ್ನು ಎಲ್ಲರಿಗೂ ತಿಳಿಯಪಡಿಸಿದ್ದಾನೆ.

"ಯೆಹೋವನ ಮಾತೇನೆಂದರೆ– ನೀವು ನನ್ನ ಸಾಕ್ಷಿ, ನಾನು ಆರಿಸಿಕೊಂಡಿರುವ ಸೇವಕನು. ನೀವು ನನ್ನನ್ನು ತಿಳಿದು ನಂಬಿ ನನ್ನನ್ನು ಪರಮಾತ್ಮನು ಎಂದು ಗ್ರಹಿಸುವಹಾಗೆ ಇದನ್ನು ನಡಿಸಿದೆನು; ನನಗಿಂತ ಮುಂಚೆ ಯಾವ ದೇವರೂ ಇರಲಿಲ್ಲ, ನನ್ನ ಅನಂತರದಲ್ಲಿಯೂ ಇರುವುದಿಲ್ಲ" (ಯೆಶಾಯ 43:10).

ದೇವರು ಈ ಇಸ್ರಾಯೇಲ್ ಜನಾಂಗವನ್ನು ಲೋಕಕ್ಕೆಲ್ಲಾ ಚದುರಿಸುವೆನು ಎಂದು ಮೊದಲೇ ಪ್ರವಾದನೆ ತಿಳಿಸಿದ್ದನು.

"ಭೂಮಂಡಲದ ಚತುರ್ದಿಕ್ಕುಗಳಲ್ಲಿರುವ ಎಲ್ಲಾ ಜನಾಂಗಗಳಲ್ಲಿಯೂ ಯೆಹೋವನು ನಿಮ್ಮನ್ನು ಚದರಿಸುವೆನು; ಅಲ್ಲಿ ನಿಮಗಾದರೋ ನಿಮ್ಮ ಪಿತೃಗಳಿಗಾದರೋ ಗೊತ್ತಿಲ್ಲದ ದೇವರುಗಳನ್ನು ಪೂಜಿಸುವಿರಿ" (ಧರ್ಮೋಪದೇಶ ಕಾಂಡ 28:64).

ದೇವರು ಮತ್ತೂ ತಿಳಿಸಿರುವುದೇನೆಂದರೆ, ಇಸ್ರಾಯೇಲ್ಯರನ್ನು ಮತ್ತೆ ಒಟ್ಟುಗೂಡಿಸುವೆನು ಎಂದು ತಿಳಿಸಿದ್ದಾನೆ.

"ಜನಾಂಗಗಳೇ, ಯೆಹೋವನ ವಾಕ್ಯವನ್ನು ಕೇಳಿರಿ, ದೂರ ದ್ವೀಪಗಳಲ್ಲಿ ಸಾರಿರಿ! ಇಸ್ರಾಯೇಲ್ಯರನ್ನು ಚದರಿಸಿದಾತನು ಕುರುಬನು ಮಂದೆಯನ್ನು ಕಾಯುವ ಕುರುಬನಂತೆ ಅವರನ್ನು ಕೂಡಿಸಿ ಕಾಪಾಡುವನು" (ಯೆರೆಮೀಯ 31:10).

ಸತ್ಯವೇದದ ಸ್ಪಷ್ಟ ಬೋಧನೆಯೆಂದರೆ, ಯೆಹೂದ್ಯರು ಮತ್ತೆ

ಒಂದುಕಡೆ ಸೇರಿ ಇಸ್ರಾಯೇಲ್ ರಾಜ್ಯವನ್ನು ಸ್ಥಾಪಿಸುತ್ತಾರೆ ಎಂಬುದೇ ಆಗಿದೆ.

ಯೆರುಸಲೇಮ್ ಅನ್ಯರ ಆಳ್ವಿಕೆಗೆ ತುತ್ತಾಗುತ್ತದೆ, ಇದು ಕೇವಲ ಒಂದು ನಿಗಧಿತ ಸಮಯದವರೆಗೆ ಮಾತ್ರ. ಆದರೆ ಶಾಶ್ವತವಾಗಿ ಅಲ್ಲ ಎಂದು ಯೇಸುಕ್ರಿಸ್ತ ತಿಳಿಸಿದ್ದಾನೆ.

"....ಅನ್ಯದೇಶದವರ ಸಮಯಗಳು ಪೂರೈಸುವ ತನಕ ಯೆರುಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುತ್ತಿರುವುದು" (ಲೂಕ 21:24).

ಯೇಸುಕ್ರಿಸ್ತ ಮುಂದುವರೆದು ತಿಳಿಸಿರುವುದೇನೆಂದರೆ–ಯಾವಾಗ ಈ ಕಾರ್ಯ ಪರಿಪೂರ್ಣವಾಗುತ್ತದೋ ಆಗ ಮನುಷ್ಯಕುಮಾರನು(ಯೇಸು) ಹಿಂತಿರುಗಿ ಬರುತ್ತಾನೆ ಎಂದು ತಿಳಿಸಿದ್ದಾನೆ. "ಆಗ ಮನುಷ್ಯಕುಮಾರನು ಬಲದಿಂದಲೂ ಬಹುಮಹಿಮೆಯಿಂದಲೂ ಮೇಘದಲ್ಲಿ ಬರುವುದನ್ನು ಕಾಣುವರು" (ಲೂಕ 21:27).

ಕ್ರಿ.ಶ.70 ರಲ್ಲಿ ಯೆಹೂದ್ಯರು ಯೆರುಸಲೇಮಿನ ಮೇಲೆ ತಮ್ಮ ಹಿಡಿತವನ್ನು ಕಳೆದುಕೊಂಡರು. ರೋಮನ್ನರು ಯೆಹೂದ್ಯರ ಮೇಲೆ ಪೂರ್ಣವಿಜಯ ಸಾಧಿಸಿ ಇಸ್ರಾಯೇಲ್ಯರನ್ನು ಭೂಲೋಕದ ಎಲ್ಲಾ ಕಡೆ ಚದರಿ ಓಡಿ ಹೋಗುವಂತೆ ಮಾಡಿದರು. ಆದರೆ ಈ ಚದರುವಿಕೆ ಶಾಶ್ವತವಾದದ್ದಲ್ಲ. 1967ರಲ್ಲಿ ಇಸ್ರಾಯೇಲ್ಯರು ಯೆರುಸಲೇಮನ್ನು ಅರಬ್ಬರ ಹಿಡಿತದಿಂದ ಬಿಡಿಸಿಕೊಂಡರು. ಸರಿಸುಮಾರು 1900 ವರ್ಷಗಳಷ್ಟು ಕಾಲ ಯೆರುಸಲೇಮ್ ಪಟ್ಟಣವು ಅನ್ಯರ ಅಧಿಕಾರದಲ್ಲಿತ್ತು. ಆದರೆ ಇಸ್ರಾಯೇಲ್ಯರು ಈಗ ಮತ್ತೆ ಯೆರುಸಲೇಮಿನ ಮೇಲೆ ಹಿಡಿತ ಪಡೆದಿರುವುದನ್ನು ಕಾಣಬಹುದು.

ಯೇಸುಕ್ರಿಸ್ತ ಹೇಳಿದ ರೀತಿಯಲ್ಲೇ ಯೆರುಸಲೇಮ್ ಪಟ್ಟಣವು ಅನ್ಯರ ಹಿಡಿತಕ್ಕೆ ಒಳಗಾಯಿತು ಮತ್ತು ಈಗ ಇಸ್ರಾಯೇಲ್ಯರ ಹಿಡಿತಕ್ಕೆ ಬಂದಿದೆ. ಅಂದರೆ ಯೇಸುಕ್ರಿಸ್ತನ ಹಿಂದಿರುಗುವಿಕೆಯ ಸಮಯ ಹತ್ತಿರವಾಗಿದೆ ಎಂದು ನಾವು ತಿಳಿದುಕೊಳ್ಳಬಹುದಾಗಿದೆ.

ನಾವು ಸತ್ಯವೇದದ ಸಂದೇಶವನ್ನು ಅರ್ಥಮಾಡಿಕೊಳ್ಳ ಬೇಕಾಗಿರುವುದು ಬಹಳ ಮುಖ್ಯವಾಗಿದೆ. ಅಪೋಸ್ತಲನಾದ ಪೇತ್ರನು ಯೇಸುಕ್ರಿಸ್ತನ ಹಿಂದಿರುಗುವಿಕೆಯ ವಿಷಯವಾಗಿ ಕೆಲವರು ಹಾಸ್ಯ, ಕುಚೋದ್ಯ,

ಕುತರ್ಕ ಮಾಡುತ್ತಾರೆ ಆದರೆ ನಾವು ಎಚ್ಚರಿಕೆಯಾಗಿರಬೇಕು ಎಂದು ಎಚ್ಚರಿಸಿದ್ದನೆ.

"ಕಡೇ ದಿವಸಗಳಲ್ಲಿ ತಮ್ಮ ದುರಾಶೆಗಳ ಪ್ರಕಾರ ನಡೆಯುವ ಕುಚೋದ್ಯಗಾರರು ಬಂದು ಕುಚೋದ್ಯ ಮಾಡುತ್ತಾ, ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನವು ಏನಾಯಿತು? ನಮ್ಮ ಪಿತೃಗಳು ನಿದ್ರೆಹೊಂದಿದ ದಿನ ಮೊದಲುಗೊಂಡು ಸಮಸ್ತವೂ ಲೋಕಾದಿಯಿಂದದ್ದ ಹಾಗೆಯೇ ಇರುವುದಲ್ಲ ಎಂದು ಹೇಳುವವರೆಂಬುದಾಗಿ ನೀವು ಮೊದಲು ತಿಳುಕೊಳ್ಳಬೇಕು" (2ಪೇತ್ರ 3:3–4).

ಅಪೋಸ್ತಲನಾದ ಪೇತ್ರನು–ದೇವರ ವಾಗ್ದಾನವನ್ನು ಮರೆತವರು ಕುಚೋದ್ಯವನ್ನು ಮಾಡುತ್ತಾರೆ ಎಂದು ಎಚ್ಚರಿಸಿದ್ದಾನೆ. ಆದರೆ ದೇವರ ವಾಗ್ದಾನವೇನೆಂದರೆ, ಆತನು ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿಕೊಡುವುದೇ ಆಗಿದೆ. ದೇವರು ಸತ್ಯವಂತನು, ಆತನ ವಾಕ್ಯ ಎಂದಿಗೂ ಬಿದ್ದುಹೋಗುವುದಿಲ್ಲ.

"ದೇವರು ತನ್ನ ವಾಗ್ದಾನವನ್ನು ಮರೆಯುವುದಿಲ್ಲ ಮತ್ತು ಆ ವಾಗ್ದಾನ ನೆರವೇರಿಕೆಗೆ ಒಂದು ಸಮಯವನ್ನು ನಿಗಧಿ ಮಾಡಿದ್ದಾನೆ. ಯಾರು ಏನೇ ಹೇಳಿದರು ಸತ್ಯವೇದದ ವಾಕ್ಯ ಬದಲಾಗುವುದಿಲ್ಲ." ಇನ್ನು ಒಂದು ಬಹು ಮುಖ್ಯ ವಿಷಯವೆಂದರೆ ದೇವರು ದೀರ್ಘಶಾಂತನು ಮತ್ತು ನಾವು ನಾಶವಾಗುವುದು ದೇವರಿಗೆ ಇಷ್ಟವಿಲ್ಲ(ವಚನ 9). ಏಕಂದರೆ ನಾವು ಆತನ ರಾಜ್ಯದಲ್ಲಿ ಸೇರಬೇಕೆಂಬುದೇ ಆತನ ಉದ್ದೇಶವಾಗಿದೆ.

ಯೇಸುಕ್ರಿಸ್ತ ಈಗ ಏನಾದರೂ ಹಿಂತಿರುಗಿ ಬಂದರೆ, ನಾವು ಆತನ ರಾಜ್ಯದಲ್ಲಿ ಸೇರಲು ಸಿದ್ಧವಾಗಿದ್ದೇವೆಯೋ ಅಥವಾ ಇಲ್ಲವೇ? ಸೇರಲು ತಯಾರಾಗಿಲ್ಲ ಎಂದಾದರೆ, ಈಗಲೇ ತಡಮಾಡದೆ ಆತನ ರಾಜ್ಯಕ್ಕೆ ಸೇರಲು ಬೇಕಾಗುವ ತಯಾರಿಯನ್ನು ಮಾಡಿಕೊಳ್ಳಿರಿ. ಏಕಂದರೆ ದೇವರ ಮಗನ ಹಿಂದಿರುಗುವಿಕೆಯ ಕಾಲ ಹತ್ತಿರವಾಗಿದೆ.

–ಮಾಲ್ಕಂ ಸ್ಕಾಟ್.

ಪರಲೋಕದಲ್ಲಿ ನಿಮಗೆ ಬಹಳ ಫಲಸಿಕ್ಕುವುದು(ಮತ್ತಾಯ 5:12) ಎಂದು ಯೇಸು ತಿಳಿಸಿದ್ದನೆ, ಆದರೆ ಆತ ನೀವು ಪರಲೋಕಕ್ಕೆ ಹೋಗಿ ಆ ಫಲವನ್ನು ತೆಗೆದುಕೊಳ್ಳಬೇಕು ಎಂದು ಎಲ್ಲೂ ತಿಳಿಸಿಲ್ಲ. ಏಕೆಂದರೆ "ಮನುಷ್ಯಕುಮಾರನೇ ಹೊರತು ಮತ್ತಾರೂ ಪರಲೋಕಕ್ಕೆ ಏರಿಹೋದವನಲ್ಲ" (ಯೋಹಾನ 3:13). ಜೊತೆಗೆ ಯೇಸುಕ್ರಿಸ್ತ ಈ ಲೋಕಕ್ಕೆ ಹಿಂತಿರುಗಿ ಬರುತ್ತೇನೆ ಮತ್ತು ಮಾನವರಿಗೆ ಪ್ರತಿಫಲವನ್ನು ತರುತ್ತೇನೆ ಎಂದು ವಾಗ್ದಾನ ಮಾಡಿದ್ದಾನೆ."ಇಗೋ ಬೇಗ ಬರುತ್ತೇನೆ; ನಾನು ಪ್ರತಿಯೊಬ್ಬನಿಗೆ ಅವನವನ ನಡೆತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ" (ಪ್ರಕಟನೆ22:12).

ಈ ಕಿರುಹೊತ್ತಿಗೆಯಲ್ಲಿ ಸತ್ಯವೇದವು ಯೇಸುಕ್ರಿಸ್ತನ ಹಿಂದಿರುಗುವಿಕೆಯ ಬಗ್ಗೆ ಏನು ತಿಳಿಸುತ್ತದೆ ಮತ್ತು ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿಬಂದು ಈ ಲೋಕದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿ ದೇವರ ನಿಯಮದಂತೆ ಆಳ್ವಿಕೆ ನಡೆಸುತ್ತಾನೆ ಎಂದು ತಿಳಿಸಿಕೊಡುತ್ತದೆ.

Christ is Coming Again! Kannada 1500 copies - 2008

ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:
ದಿ ಕ್ರಿಸ್ಟಡೆಲ್ಫಿಯನ್ಸ್,
ಅಂಚೆ ಪೆಟ್ಟಿಗೆ ಸಂಖ್ಯೆ 63,
ಮಂಡ್ಯ-571 401.

*Elsewhere:*
*Printland Publishers,GPO Box 159,*
*Hyderabad A.P. 500001,INDIA.*